**ಓ.ಎಸ್. ನಂಃ 50/2026**

**ಪಿ.ಡಬ್ಲ್ಯೂಃ 1**

**ದಿನಾಂಕ 30-06-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ.ಕೆ.ಸಿ.ಎಮ್. ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಹಕ್ಕು ಪತ್ರವನ್ನ ನಿಪಿ-1 ಎಂದು, ತೆರಿಗೆ ಪಾವತಿ ರಶೀದಿಯನ್ನು ನಿಪಿ-2 ಎಂದು, ಡಿಮ್ಯಾಂಡ್ ರಿಜಿಸ್ಟರಿನ ದೃಢೀಕೃತ ನಕಲನ್ನು ನಿಪಿ-3 ಎಂದು, ಆಸ್ತಿ ತೆರಿಗೆ ರಿಜಿಸ್ಟರಿನ ನಕಲನ್ನು ನಿಪಿ-4 ಎಂದು, ನಮೂನೆ 3 ಅನ್ನು ನಿಪಿ-5 ಎಂದು, ಋಣಭಾರ ಪತ್ರಗಳನ್ನು ನಿಪಿ-6 ಮತ್ತು ನಿಪಿ-7 ಎಂದು, ದಿನಾಂಕಃ 12.05.2025 ರ ನೋಂದಾಯಿತ ದಾನ ಪತ್ರದ ಅಸಲು ಪ್ರತಿಯನ್ನು ನಿಪಿ-8 ಎಂದು, ನಮೂನೆ 3 ಅನ್ನು ನಿಪಿ-9 ಎಂದು, ತೆರಿಗೆ ಪಾವತಿ ರಶೀದಿಗಳನ್ನು ನಿಪಿ-10 ರಿಂದ ನಿಪಿ-12 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**

**ಕೆ.ಆರ್.ನಗರ**